ಹಾವೇರಿ ಜಿಲ್ಲೆಗೆ ಬಿಡುಗಡೆ ಆಗಿರುವ ಅನುದಾನ

2254 (3253); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2013–14 ಹಾಗೂ 2014–15 ನೇ ಸಾಲಿನ ಮತ್ತು ಆಯವ್ಯಯದಲ್ಲಿ ಹಾವೇರಿ ಜಿಲ್ಲೆಗೆ ತಾಲ್ಲೂಕುವಾರು ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು;

ಆ) 2015–16 ನೇ ಸಾಲಿನಲ್ಲಿ ನಿಗದಿ ಮಾಡಿದ ಮೊತ್ತವೆಷ್ಟು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಮತ್ತು ಆ) ಆರ್ಥಿಕ ಇಲಾಖೆಯಿಂದ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮತ್ತು ಇತರೆ ಆಡಳಿತ ಇಲಾಖೆಗಳಿಂದ ಹಾವೇರಿ ಜಿಲ್ಲೆಯ ತಾಲ್ಲೂಕು ಪಂಚಾಯತ್‌ಗಳಿಗೆ 2013–14 ಹಾಗೂ 2014–15 ನೇ ಸಾಲಿನಲ್ಲಿ ಅನುದಾನ ಬಿಡುಗಡೆಗೊಳಿಸಿದ್ದು, ತಾಲ್ಲೂಕುವಾರು ಹಂಚಿಕೆ ಮಾಡಿದ, ಬಿಡುಗಡೆಗೊಳಿಸಿದ ಮತ್ತು ವೆಚ್ಚ ಮಾಡಿದ ವಿವರ ಕೆಳಕಂಡಂತೆ ಇದೆ:

(₹ ಲಕ್ಷಗಳಲ್ಲಿ)

ತಾಲ್ಲೂಕು	2013–14			2014–15		
	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ
ಬ್ಯಾಡಗಿ	3446 37	3446 37	3251 99	4167 72	4167 72	3856 42
ಹಾನಗಲ್	5269 53	5269 53	4936 80	6050 28	6050 28	5850 33
ಹಾವೇರಿ	5695 26	5695 26	5070 88	6216 72	6216 71	6060 66
ಹಿರೇಕೆರೂರು	4984 09	4984 09	4609 98	6583 97	6583 97	6227 85
ರಾಣೆಬೆನ್ನೂರು	6540 76	6540 76	5903 26	6653 50	6653 50	6504 57
ಸವಣೂರು	3249 24	3249 24	3150 13	3981 32	3981 32	3780 79
ಶಿಗ್ಗಾಂವ	3967 93	3967 93	3665 83	4523 62	4523 62	3950 24
ಒಟ್ಟು	33153.18	33153.18	30594 87	38177.33	38177.32	36230.86

ತಾಲ್ಲೂಕು	2015–16
	ಹಂಚಿಕೆ
ಬ್ಯಾಡಗಿ	4248 53
ಹಾನಗಲ್	6080 08
ಹಾವೇರಿ	6315 83
ಹಿರೇಕೆರೂರು	6450 28
ರಾಣೆಬೆನ್ನೂರು	7428 28
ಸವಣೂರು	4133 46
ಶಿಗ್ಗಾಂವ	4820 09
ಒಟ್ಟು	39476.55

ಮುಜರಾಯಿ ದೇವಸ್ಥಾನಗಳು

2255 (3254); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಹಿರೇಕೆರೂರು ತಾಲ್ಲೂಕಿನಲ್ಲಿರುವ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಹಾಗಿದ್ದಲ್ಲಿ 2012–13 ರಿಂದ 2014–15 ನೇ ಸಾಲಿನವರೆಗೆ ದೇವಸ್ಥಾನಗಳಿಗೆ ನೀಡಿರುವ ಅನುದಾನವೆಷ್ಟು;

ಇ) 2015–16 ನೇ ಸಾಲಿಗೆ ಈ ದೇವಸ್ಥಾನಗಳಲ್ಲಿ ಕೆಲವು ದೇವಸ್ಥಾನಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೆ?